# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಾಸರಹಳ್ಳಿ ವಲಯ, ಹೆಗ್ಗನಹಳ್ಳಿ ಉಪವಿಭಾಗ

### ವಾರ್ಡ್ ನಂ.71 :ಹೆಗ್ಗನಹಳ್ಳಿ

**ದಿನಾಂಕ: 02.07.2022 ರಂದು ಬೆಳಿಗ್ಗೆ 11.00 ಗಂಟೆಗೆ ಶ್ರೀ ಬಿ.ಆರ್.ರವಿಕುಮಾರ್, ನೋಡಲ್ ಅಧಿಕಾರಿ, ವಾರ್ಡ್ 71 ರವರ ಅಧ್ಯಕ್ಷತೆಯಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರು, ಹೆಗ್ಗನಹಳ್ಳಿ ಉಪವಿಭಾಗ ಕಛೇರಿಯಲ್ಲಿ ನಡೆದ ಸಭೆಯ ನಡಾವಳಿಗಳು:**

**ಸಭೆಯಲ್ಲಿ ಹಾಜರಿದ್ದವರು:**

| ಕ್ರ.ಸಂ | ಹೆಸರು | ಪದನಾಮ |
|---|---|---|
| 1 | ಶ್ರೀ ಬಿ.ಆರ್.ರವಿಕುಮಾರ್ | ನೋಡಲ್ ಅಧಿಕಾರಿ–ವಾರ್ಡ್ ನಂ.71 |
| 2 | ಜಯಂತ್‌ಕುಮಾರ್ | ಸಹಾಯಕ ಅಭಿಯಂತರರು, ಕಾರ್ಯದರ್ಶಿ ಹಾಗೂ ಸಂಚಾಲಕರು–ವಾರ್ಡ್ 71 |
| 3 | ಬಿ.ಎಸ್ ಗಿರೀಗೌಡ | ಸದಸ್ಯರು |
| 4 | ಲಿಂಗಪ್ಪ | ಸದಸ್ಯರು |
| 5 | ಕೆ ಎ ಉಮೇಶ | ಸದಸ್ಯರು |
| 6 | ಕೆ ಸಿ ಶಿವರಾಮಯ್ಯ | ಸಂಪಾದಕ, ಮಾರ್ದನಿ ದಿನಪತ್ರಿಕೆ |
| 7 | ವೆಂಕಟರಾಜು | ಸದಸ್ಯರು |
| 8 | ಎನ್ ನಟರಾಜ್ | ಸದಸ್ಯರು |
| 9 | ಕುಮಾರ್ | ಸದಸ್ಯರು |
| 10 | ರಾಮು ಎಂ ಹೆಚ್ | ಸದಸ್ಯರು |
| 11 | ಸಾಗರ್ ಕೆ ಬಿ | ಸದಸ್ಯರು |
| 12 | ರಾಮಣ್ಣ | ಸದಸ್ಯರು |
| 13 | ಕನಲ್ ಕುಮಾರ್ | ಸಹಾಯಕ ಅಭಿಯಂತರರು, ಬೆಸ್ಕಾಂ |
| 14 | ನಾಗಾರ್ಜುನ ಕೆ | ಸಹಾಯಕ ಅಭಿಯಂತರರು, ಬೆಸ್ಕಾಂ (ಕೆ2) |
| 15 | ಗಂಗರೆಡ್ಡಿ | ಕಂದಾಯ ಇಲಾಖೆ |

**:ನಡಾವಳಿಯ ವರದಿ:**

- ಕಾರ್ಯದರ್ಶಿಗಳಾದ ಶ್ರೀ ಜಯಂತ್‌ಕುಮಾರ್ ಮಾತನಾಡುತ್ತಾ ಸಭೆಗೆ ಹಾಜರಾದ ನೋಡಲ್ ಅಧಿಕಾರಿ ಹಾಗೂ ಪಾಲಿಕೆಯ ಅಧಿಕಾರಿಗಳು/ನೌಕರರಿಗೆ ಸ್ವಾಗತ ಕೋರಿದರು.

- **ವಿಷಯ ಸಂಖ್ಯೆ: 1 :– ವಾರ್ಡ್ ವ್ಯಾಪ್ತಿಯಲ್ಲಿ ಔಷಧಿ ಸಿಂಪಡಣೆ ಸಮರ್ಪಕವಾಗಿ ನಡೆಯುತ್ತಿಲ್ಲದಿರುವುದರ ಬಗ್ಗೆ**

ಸೊಳ್ಳೆ ಔಷಧಿ ಸಿಂಪಡಣೆ ಬಗ್ಗೆ ಈ ಹಿಂದಿನ ಸಭೆಯಲ್ಲಿ ಚರ್ಚಿಸಿದಂತೆ ಪೂರ್ಣ ಮಾಹಿತಿ ನೀಡಲು ಹಿರಿಯ ಆರೋಗ್ಯ ಪರಿವೀಕ್ಷಕರಿಗೆ ತಿಳಿಸಿದ್ದು, ಸದರಿಯವರು ಮಾಹಿತಿಯನ್ನು ವಾರ್ಡ್ ಸಮಿತಿಯಲ್ಲಿ ತಿಳಿಸಿರುತ್ತಾರೆ. ಆದರೆ ಸದರಿ ವರದಿಯಲ್ಲಿ ಯಾವ ಯಾವ ಸ್ಥಳಗಳಲ್ಲಿ ಸಿಂಪಡಣೆ ನಡೆಸಿರುವ ಬಗ್ಗೆ ದಾಖಲಾಗಿರುವುದಿಲ್ಲ. ಆದ್ದರಿಂದ ಸಂಪೂರ್ಣ ವರದಿಯನ್ನು ಒಳಗೊಂಡ ದಾಖಲೆಗಳನ್ನು ನೀಡುವಂತೆ ಸದಸ್ಯರು ಕೋರಿದರು.

ಇದಕ್ಕೆ ಹಿರಿಯ ಆರೋಗ್ಯ ಪರಿವೀಕ್ಷಕರು ಮುಂದಿನ ಸಭೆಯಲ್ಲಿ ಸಂಪೂರ್ಣ ದಾಖಲೆಗಳನ್ನು ನೀಡುವುದಾಗೀ ತಿಳಿಸಿದರು.

**ವಿಷಯ ಸಂಖ್ಯೆ: 2 :– ಸರ್ಕಾರಿ ಆಸ್ತಿ ಮತ್ತು ಹಾಲಿನ ಮಾಹಿತಿ ಒದಗಿಸುವ ಬಗ್ಗೆ**

ಸದಸ್ಯರಾದ ಉಮೇಶ್ ರವರು ಮಾತನಾಡಿ ವಾರ್ಡ್ 71ರ ವ್ಯಾಪ್ತಿಯಲ್ಲಿರುವ ಸರ್ಕಾರಿ ಆಸ್ತಿಗಳ ವಿವರಗಳನ್ನು ನೀಡುವಂತೆ ಹಿಂದಿನ ಸಭೆಯಲ್ಲಿ ಕೋರಿದ್ದರೂ ಸಂಬಂಧಪಟ್ಟ ಇಲಾಖೆರವರು ಮಾಹಿತಿ ನೀಡಿರುವುದಿಲ್ಲ. ಆದ್ದರಿಂದ ಸದರಿ ವಿವರಗಳನ್ನು ನೀಡುವಂತೆ ಕೋರಿದರು.

ಇದಕ್ಕೆ ನೋಡಲ್ ಅಧಿಕಾರಿ ರವರು ಪ್ರತಿಕ್ರಿಯಿಸಿ ಸಭೆಯಲ್ಲಿ ಹಾಜರಿದ್ದ ಕಂದಾಯ ಅಧಿಕಾರಿಗಳಿಗೆ ಸದರಿಯವರಿಗೆ ಮಾಹಿತಿ ನೀಡಲು ಸೂಚಿಸಿದರು. ಅದರಂತೆ ಸಭೆಯಲ್ಲಿ ಹಾಜರಿದ್ದ ಗಂಗರೆಡ್ಡಿರವರು ಸದರಿಯವರಿಗೆ ಸಭೆ ಮುಗಿದ ಬಳಿಕವೆ ಮಾಹಿತಿ ನೀಡುವುದಾಗಿ ತಿಳಿಸಿದರು.

**ವಿಷಯ ಸಂಖ್ಯೆ: 3 :– ಬಿ ಖಾತೆಗೆ ಸಲ್ಲಿಸಬೇಕಾಗಿರುವ ವಿವರಗಳನ್ನು ಸೂಚನಾ ಫಲಕಗಳಲ್ಲಿ ಅಳವಡಿಸುವ ಬಗ್ಗೆ.**

ಸದಸ್ಯರಾದ ಕೆ.ಎ ಉಮೇಶ್ ರವರು ಮಾತನಾಡಿ, ಬಿ ಖಾತೆಯನ್ನು ಪಡೆಯಲು ಸಲ್ಲಿಸಬೇಕಾಗಿರುವ ದಾಖಲೆಗಳನ್ನು ಕಛೇರಿಯ ಆವರಣದ ಸೂಚನಾ ಫಲಕಗಳಲ್ಲಿ ಅಳವಡಿಸಿದ್ದಲ್ಲಿ ಸಾರ್ವಜನಿಕರಿಗೆ ತುಂಬಾ ಅನುಕೂಲವಾಗಲಿದ್ದು, ಸೂಚನಾ ಫಲಕಗಳಲ್ಲಿ ಸದರಿ ವಿವರಗಳನ್ನು ನೀಡುವಂತೆ ಕೋರಿದರು.

ಇದಕ್ಕೆ ಕಂದಾಯ ಪರಿವೀಕ್ಷಕರಾದ ಗಂಗರೆಡ್ಡಿ ರವರು ಮಾತನಾಡಿ, ಬಿ ಖಾತೆಗೆ ಸಲ್ಲಿಸಬೇಕಾಗಿರುವ ವಿವರಗಳನ್ನು ಸೂಚನಾ ಫಲಕಗಳಲ್ಲಿ ಅಳವಡಿಸಲು ಕ್ರಮ ಕೈಗೊಳ್ಳುವುದಾಗೀ ತಿಳಿಸಿದರು.

**ವಿಷಯ ಸಂಖ್ಯೆ: 4 :–**ಬೆಸ್ಕಾಂ ಇಲಾಖೆಯಿಂದ ಅಗೆದಿರುವ ರಸ್ತೆ ಅಗೆತಗಳನ್ನು **Restoration** ಮಾಡುವ ಬಗ್ಗೆ

ಸದಸ್ಯರಾದ ಗಿರೀಗೌಡರವರು ಮಾತನಾಡಿ ವಾರ್ಡ್ 71ರ ವ್ಯಾಪ್ತಿಯ ಕೆ.ಟಿ.ಜಿ ರಸ್ತೆ, ಓಂ ಶಕ್ತಿ ದೇವಸ್ಥಾನದ ರಸ್ತೆ ಹಾಗೂ ವಾರ್ಡಿನ ಹಲವು ಕಡೆಗಳಲ್ಲಿ ಬೆಸ್ಕಾಂ ಇಲಾಖೆಯಿಂದ ಅಗೆದಿರುವ ರಸ್ತೆ ಅಗೆತಗಳನ್ನು ಮುಚ್ಚಿರುವುದಿಲ್ಲ ಇದರಿಂದಾಗಿ ಸಾರ್ವಜನಿಕರಿಗೆ & ವಾಹನ ಸಂಚಾರಕ್ಕೆ ತುಂಬಾ ಆಡಚಣೆಯಾಗಿದ್ದು, ಹಲವು ಕಡೆಗಳಲ್ಲಿ ಪ್ರಾಣಾಪಾಯವಾಗುವ ಸಂಭವವಿರುತ್ತದೆ. ಆದ್ದರಿಂದ ಅತೀ ಜರೂರಾಗೀ ಸದರಿ ರಸ್ತೆ ಅಗೆತಗಳನ್ನು ಮುಚ್ಚುವಂತೆ ಕೋರಿದರು.

ಇದಕ್ಕೆ ಕನಲ್ ಕುಮಾರ್, ಸಹಾಯಕ ಅಭಿಯಂತರರು (ಬೆಸ್ಕಾಂ) ಮಾತನಾಡಿ, ಈಗಾಗಲೇ ಹಲವು ಕಡೆಗಳಲ್ಲಿ **Restoration** ಮಾಡುವ ಸಂಬಂಧ ವೆಟ್ ಮಿಕ್ಸ್ ಅಳವಡಿಸಿದ್ದು, ಸಭೆ ಮುಗಿದ ಬಳಿಕ ಜಂಟಿ ಸ್ಥಳಪರಿಶೀಲನೆ ಮಾಡಿ ರಸ್ತೆ ಅಗೆತಗಳನ್ನು ಮುಚ್ಚಲು ಅಗತ್ಯ ಕ್ರಮ ಕೈಗೊಳ್ಳುವುದಾಗೀ ತಿಳಿಸಿದರು.

**ವಿಷಯ ಸಂಖ್ಯೆ: 5 :–** ಲಕ್ಷ್ಮಣ ನಗರದ ಆರ್.ಇ.ಎಸ್ ಕಾಲೇಜ್ ಬಳಿ ಬೀದಿದೀಪ ಉರಿಯುತ್ತಿಲ್ಲ ದಿರುವುದರ ಬಗ್ಗೆ

ಸದಸ್ಯರಾದ ಕೆ ಎ ಉಮೇಶ್ ರವರು ಮಾತನಾಡಿ ವಾರ್ಡ್ 71ರ ವ್ಯಾಪ್ತಿಯ ಲಕ್ಷ್ಮಣ ನಗರದ ಆರ್.ಇ.ಎಸ್ ಕಾಲೇಜ್ ಬಳಿ ಎಲ್.ಇ.ಡಿ ದೀಪ ಉರಿಯುತ್ತಿಲ್ಲ. ಇದನ್ನು ಸರಿಪಡಿಸಬೇಕೆಂದು ಕೋರಿದರು.

ಇದಕ್ಕೆ ಪ್ರತಿಕ್ರಿಯಿಸಿದ ನೋಡಲ್ ಅಧಿಕಾರಿರವರು ಸಂಬಂಧಪಟ್ಟ ಕಾರ್ಯಪಾಲಕ ಅಭಿಯಂತರರ ಗಮನಕ್ಕೆ ತಂದು ಕ್ರಮಕೈಗೊಳ್ಳಲು ಕೋರುವುದಾಗೀ ತಿಳಿಸಿದರು.

- **<u>ವಿಷಯ ಸಂಖ್ಯೆ: 6 :-</u>ಶುದ್ಧ ಕುಡಿಯುವ ನೀರಿನ ಘಟಕವನ್ನು ಸ್ಥಾಪಿಸಲು ಕೋರಿ.**

ಸದಸ್ಯರಾದ ಉಮೇಶ್ ರವರು ಮಾತನಾಡಿ, ವಾರ್ಡ್ ನಂ.71ರ ವ್ಯಾಪ್ತಿಯ ಲಕ್ಷ್ಮಣನಗರದಲ್ಲಿ ಶುದ್ಧ ಕುಡಿಯುವ ನೀರಿನ ಘಟಕವನ್ನು ಸ್ಥಾಪಿಸಲು ಮನವಿ ಮಾಡಿದರು.

ಇದಕ್ಕೆ ವಾರ್ಡ್ ನಂ.71ರ ಸಹಾಯಕ ಅಭಿಯಂತರರು ರವರು ಮಾತನಾಡಿ, ಲಕ್ಷ್ಮಣನಗರದಲ್ಲಿ ಶುದ್ಧ ಕುಡಿಯುವ ನೀರಿನ ಘಟಕವನ್ನು ಸ್ಥಾಪಿಸಲು ಪ್ರಸಕ್ತ ಸಾಲಿನಲ್ಲಿ ಅನುದಾನ ಲಭ್ಯವಿರುವುದಿಲ್ಲ. ಮುಂದಿನ ಕ್ರಿಯಾ ಯೋಜನೆಯಲ್ಲಿ ಈ ವಿಷಯವಾಗೀ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿದರು.

- **<u>ವಿಷಯ ಸಂಖ್ಯೆ:7 :-</u>ಸುಂಕದಕಟ್ಟೆ ಹೊಯ್ಸಳ ನಗರ ನಿವಾಸಿಗಳ ಕುಂದುಕೊರತೆಯ ಬಗ್ಗೆ**

ವಾರ್ಡ್ ಕಮಿಟಿ ಸದಸ್ಯರು ಹಾಗೂ ಸುಂಕದಕಟ್ಟೆ ನಾಗರೀಕರ ಹಿತರಕ್ಷಣಾ ವೇದಿಕೆ (ರಿ). ಅಧ್ಯಕ್ಷರೂಆದ ಶ್ರೀ ವೆಂಕಟರಾಜುರವರು ಮಾತನಾಡಿ, ಸುಂಕದಕಟ್ಟೆ ಹೊಯ್ಸಳನಗರ ನಿವಾಸಿಗಳ ಕುಂದುಕೊರತೆಯ ಬಗ್ಗೆ ಪತ್ರಮುಖೇನ ಸಭೆಯ ಗಮನಕ್ಕೆ ತಂದಿದ್ದು, ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳಿಗೆ ಸೂಕ್ತ ಸಲಹೆ ನೀಡಬೇಕೆಂದು ಕೋರಿದರು.

ಇದಕ್ಕೆ ನೋಡಲ್ ಅಧಿಕಾರಿಗಳು ಮಾತನಾಡಿ, ಪತ್ರದಲ್ಲಿ ತಿಳಿಸಿರುವ ಸಮಸ್ಯೆಗಳ ಪೈಕಿ ಬೆಸ್ಕಾಂ & ಕಾಮಗಾರಿ ಇಲಾಖೆಗೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸುವಂತೆ ಸಭೆಯಲ್ಲಿ ಹಾಜರಿದ್ದ ಬೆಸ್ಕಾಂ ಸಿಬ್ಬಂದಿಗೆ ದೂರಿನ ಪ್ರತಿಯನ್ನು ನೀಡಿ ಮೇಲಾಧಿಕಾರಿಗಳ ಗಮನ ಸೆಳೆದು ಕ್ರಮ ಕೈಗೊಳ್ಳುವಂತೆ ತಿಳಿಸಲು ಸೂಚಿಸಿದರು. ಇನ್ನುಳಿದ ಸಮಸ್ಯೆಗಳಿಗೆ ಆಯಾ ಇಲಾಖೆಗಳ ಗಮನಕ್ಕೆ ತಂದು ಹಿಂಬರಹ ಪಡೆಯುವಂತೆ ಕಾರ್ಯದರ್ಶೀರವರಿಗೆ ಸೂಚಿಸಿದರು.

- **<u>ವಿಷಯ ಸಂಖ್ಯೆ: 8:-</u>ಉದ್ಯಾನವನಗಳಲ್ಲಿನ ವಿದ್ಯುತ್ ದೀಪಗಳನ್ನು ಅಳವಡಿಸುವ ಬಗ್ಗೆ**

ಸದಸ್ಯರಾದ ವೆಂಕಟರಾಜುರವರು ಪತ್ರವನ್ನು ನೀಡಿ, ವಾರ್ಡ್ ನಂ.71ರ ವ್ಯಾಪ್ತಿಯಲ್ಲಿರುವ ಉದ್ಯಾನವನಗಳಲ್ಲಿ ಹಲವು ಬಾರಿ ಮೌಖಿಕವಾಗಿ ಕೋರಿದ್ದರೂ ಸಹ ವಿದ್ಯುತ್ ದೀಪಗಳನ್ನು ಅಳವಡಿಸಿರುವುದಿಲ್ಲ, 2022-23ರ ಬಜೆಟ್ ನ್ನಲ್ಲಿ ಈ ಸಂಬಂಧ ಅನುದಾನವನ್ನು ಕಾದಿರಿಸಬೇಕೆಂದು ಕೋರಿದರು.

ಇದಕ್ಕೆ ನೋಡಲ್ ಅಧಿಕಾರಿರವರು ಮಾತನಾಡಿ, ಉದ್ಯಾನವನಗಳಲ್ಲಿ ನಿರ್ವಹಣೆಯನ್ನು ಯೋಜನಾ ವಿಭಾಗ, ದಾಸರಹಳ್ಳಿ ರವರು ನಿರ್ವಹಿಸುತ್ತಿದ್ದು, ಈ ವಿಷಯವನ್ನು ಸದರಿಯವರ ಗಮನಕ್ಕೆ ತಂದು ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿದರು.

➢ ಸದಸ್ಯ ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರಾದ ಶ್ರೀ ಜಯಂತ್‌ಕುಮಾರ್‌ರವರು ಸಭೆಗೆ ಹಾಜರಾದ ಎಲ್ಲಾ ಅಧಿಕಾರಿಗಳು/ನೌಕರರಿಗೂ ಮತ್ತು ಸದಸ್ಯರಿಗೂ ವಂದನೆಯನ್ನು ತಿಳಿಸುವುದರೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸದಸ್ಯ ಕಾರ್ಯದರ್ಶಿ
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ನಂ.71, ಹೆಗ್ಗನಹಳ್ಳಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ವಾರ್ಡ್ ಸಮಿತಿ ಅಧ್ಯಕ್ಷರು
ಹಾಗೂ ವಾರ್ಡ್‌ನ ನೋಡಲ್‌ಅಧಿಕಾರಿ
ವಾರ್ಡ್ ನಂ.71, ಹೆಗ್ಗನಹಳ್ಳಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು:

1) ಮಾನ್ಯ ಶಾಸಕರು, ದಾಸರಹಳ್ಳಿ ವಿಧಾನಸಭಾ ಕ್ಷೇತ್ರ, ರವರ ಆದ್ಯ ಗಮನಕ್ಕೆ ಕಳುಹಿಸಿದೆ.
2) ಮಾನ್ಯ ವಲಯ ಆಯುಕ್ತರು, ದಾಸರಹಳ್ಳಿ ವಲಯ, ಬಿಬಿಎಂಪಿ ರವರ ಅವಗಾಹನೆಗಾಗಿ ಕಳುಹಿಸಿದೆ.
3) ಜಂಟಿ ಆಯುಕ್ತರು, ದಾಸರಹಳ್ಳಿ ವಲಯ, ಬಿಬಿಎಂಪಿ ರವರ ಅವಗಾಹನೆಗಾಗಿ ಕಳುಹಿಸಿದೆ.
4) ಕಾರ್ಯಪಾಲಕ ಅಭಿಯಂತರರು (ದಾಸರಹಳ್ಳಿ ವಿಭಾಗ) ರವರ ಮಾಹಿತಿಗಾಗಿ ಕಳುಹಿಸಿದೆ.
5) ಸಹಾಯಕ ಕಾರ್ಯಪಾಲಕ ಅಭಿಯಂತರರು (ಹೆಗ್ಗನಹಳ್ಳಿ) ರವರ ಮಾಹಿತಿಗಾಗಿ ಕಳುಹಿಸಿದೆ.
6) ಸಹಾಯಕ ಕಂದಾಯ ಅಧಿಕಾರಿ (ಹೆಗ್ಗನಹಳ್ಳಿ) ರವರ ಮಾಹಿತಿಗಾಗಿ ಕಳುಹಿಸಿದೆ.
7) ಹಿರಿಯ/ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ.71 ರವರ ಮಾಹಿತಿಗಾಗಿ
8) ವಾರ್ಡ್ ಸಮಿತಿ ಸಭೆಯ ಸದಸ್ಯರಿಗೆ ಮಾಹಿತಿಗಾಗಿ ಕಳುಹಿಸಿದೆ.
9) ಕಛೇರಿ ಕಡತಕ್ಕೆ